

# ಕೆಂಚನ ಗುಡ್ಡದ ಕಥೆ

■ ಅರವಿಂದ ಜಿ. ಜೋಷಿ,
ಮೈಸೂರು

ಅಂದು, ಕಲ್ಲಳ್ಳಿಯ ಗ್ರಾಮದ ಶಾಲೆಯ ಗುರುಗಳು 'ನಾಳೆ ನಾವು ಕೆಂಚನ ಗುಡ್ಡದ ಪ್ರವಾಸಕ್ಕೆ ಹೋಗೋಣ' ಎಂದಾಗ ಮಕ್ಕಳು ಖುಷಿಯಿಂದ ಕುಣಿಯತೊಡಗಿದರು. ಈ ಕೆಂಚನ ಗುಡ್ಡ, ಕಲ್ಲಳ್ಳಿಯ ಗ್ರಾಮದ ದಕ್ಷಿಣ ದಿಕ್ಕಿನಲ್ಲಿ ಕೇವಲ ಮೂರು ಕಿಮೀ ಅಂತರದಲ್ಲಿತ್ತು. ಅದೊಂದು ವ್ಯವಸ್ಥಿತ ಅರಣ್ಯ ಪ್ರದೇಶವಾಗಿದ್ದು ಅಲ್ಲಿನ ಶಿವ ದೇವಾಲಯಕ್ಕೆ ಪ್ರಸಿದ್ಧ ವಾಗಿತ್ತು. ಸುಂದರ ಪ್ರಕೃತಿಯ ಮಡಿಲಲ್ಲಿ ಇದ್ದುದರಿಂದ ಅದು ಪ್ರವಾಸಿ ತಾಣವಾಗಿತ್ತು. ಹೀಗಾಗಿ ಅಲ್ಲಿಗೆ ಆ ಗ್ರಾಮದವರಷ್ಟೇ ಅಲ್ಲದೇ ಹತ್ತಿರದ ಪಟ್ಟಣ, ನಗರದಿಂದಲೂ ಜನ ಬಂದು ಮನೋಲ್ಲಾಸ ಹೊಂದುತ್ತಿದ್ದರು.

ಮರುದಿನ ಶಾಲೆಯ ಮಕ್ಕಳು, ತಮ್ಮ ತಮ್ಮ ಬುತ್ತೀಗಂಟು ನೀರಿನ ಬಾಟಲಿನೊಂದಿಗೆ ಗುರುಗಳ ಮಾರ್ಗದರ್ಶನದಲ್ಲಿ ಶಿಸ್ತಾಗಿ ನಡೆದು ಕೆಂಚನಗುಡ್ಡಕ್ಕೆ ಬಂದರು. ಎತ್ತನೋಡಿದತ್ತ ಎತ್ತರದ ಹಸಿರು ವೃಕ್ಷಗಳಿಂದ ಕೂಡಿದ ಆ ಸ್ಥಳದೊಳಗೆ ಕಾಲಿರಿಸುತ್ತಿದ್ದಂತೆ ಮಕ್ಕಳಿಗೆ ಖುಷಿಯೋ ಖುಷಿ ಆಯ್ತು. ಎಲ್ಲರೂ ಬಿಸಿಲಲ್ಲಿ ನಡೆದು ಬಂದು ಸುಸ್ತಾಗಿದ್ದರಿಂದ ಗುರುಗಳು ಅವರಿಗೆಲ್ಲ ಕುಡಿಯಲು ತಂಪಾದ ಎಳೆನೀರು ಕೊಡಿಸಿಕೊಟ್ಟರು. ಎಳೆನೀರು ಕುಡಿದು ಸ್ವಲ್ಪ ಸುಧಾರಿಸಿಕೊಂಡ ನಂತರ ಗುರುಗಳಿಗೆ 'ಸಾರ್ ಈ ಸ್ಥಳಕ್ಕೆ ಕೆಂಚನಗುಡ್ಡ ಅಂತ ಹೆಸರು ಬರಲು ಕಾರಣ ಏನು?' ಎಂದು ಕುತೂಹಲದಿಂದ ಕೇಳಿದಾಗ ಗುರುಗಳು 'ತಾಳಿ ಒಂದು ನಿಮಿಷ' ಎಂದು ಹೇಳಿ ಆ ಎಳೆನೀರು ಮಾರುವಾತನಿಗೆ ಹಣ ಪಾವತಿಸಿ, ಮಕ್ಕಳು ಕೇಳಿದ ಪ್ರಶ್ನೆಯನ್ನು ಆತನಿಗೆ ಕೇಳಿದರು.

ಆಗ ಆತ ''ಸಾರ್ ಈಗ ಅರವತ್ತು ವರ್ಷಗಳ ಹಿಂದೆ ಇದೇ ಊರಲ್ಲಿ ನಮ್ಮ ತಾತ ಕೆಂಚಪ್ಪಾ ಅಂತ ಇದ್ರು. ಅವ್ರು ಐದ ಜನ ಅಣ್ಣ ತಮ್ಮಂದಿರು, ಎಲ್ಲಾರ್ಗೂ ಮದ್ವೆ ಆಗಿತ್ತು ನಮ್ಮ ತಾತಂಗೆ ಆಗಿರ್ಲಿಲ್ಲ. ಎಲ್ಲಾರೂ ಕೂಡು ಕುಟುಂಬ್ದಾಗೇ ವಾಸಾ ಮಾಡ್ತಿದ್ರು. ಅವ್ರ ಕುಟುಂಬ್ದಾಗೆ ಶಾನೇ ಬಡತನಾ ಇತ್ತು. ನಮ್ಮ ತಾತನೇ ಕೊನೆಯವಾ. ಆಗ ಅವ್ನಿಗೆ ಹದ್ನಾರು ವರ್ಷ ಇದ್ದಿರಬೇಕು. ಶಾಲೆ ಮೆಟ್ಲು ಹತ್ತಿದವನೇ ಅಲ್ಲ. ಮನ್ಯಾಗ್ ಇದ್ದುಕೊಂಡು ದಿನಾಲೂ ಆಡು–ಕುರಿ ಮೇಯ್ಸಿಕೊಂಡು ಬರ್ತಾ ಇದ್ದ. ಹಿಂಗೆ ಒಂದು